ಮತಾಂತರಗೊಳ್ಳದೆ ಇದ್ದರೂ ಮುಂದೆ ಮತಾಂತರವಾಗುವುದರಲ್ಲಿ ಸಂಶಯವಿಲ್ಲ ಎಂಬಂತೆ ಕಾದಂಬರಿ ಮುಕ್ತಾಯವಾಗುತ್ತದೆ. ಕಾದಂಬರಿಯ ಕೊನೆಯಲ್ಲಿ ಒಂದು ಮತ ಪ್ರಸಂಗ ಸಭೆಯ ಅಧ್ಯಕ್ಷರಾದ ಘನ ವೇದಮಿತ್ರ್ಯೆಯನವರು ಒಂದು ಧರ್ಮಬೋಧನೆಯನ್ನು ನೆರವೇರಿಸಿದ ನಂತರ ಯಾರು ಕ್ರೈಸ್ತಮತದ ದಾರಿಯಲ್ಲಿ ಸಾಗಲು ಸಿದ್ಧರಿದ್ದಾರೆ ಎಂದು ಕೇಳುವರು. ಕಾದಂಬರಿಯ ಕೊನೆ ಹೀಗೆ:

'ಎಲ್ಲರ ಹೃದಯಗಳೂ ಕಂಪಿಸತೊಡಗಿದುವು, 'ನಾನು, 'ನಾನು' ಎಂಬ ಶಬ್ದಗಳು ಸಾವಿರಾರು ಕೇಳಬಂದುವು. ಅನೇಕರ ಕಣ್ಣುಗಳು ಅಶ್ರುಪೂರಿತವಾಗಿದ್ದುವು. ಮೊದಲು ಮಾಧವರಾಯನು – 'ನಾನು' ಎಂದನು. ಪ್ರಭಾಕರನು -'ನಾನು' ಎಂದನು. ಹೇಮಲತೆಯು – 'ನಾನು ಸಹ' ಎಂದಳು.

ಕಟ್ಟಕಡೆಗೆ ಅಧ್ಯಕ್ಷರು ಹೀಗೆ ನುಡಿದರು :- 'ನೀವು ಆರೇ ಆಗಲಿ, ಸ್ವರ್ಗರಾಜ್ಯವನ್ನು ಪ್ರವೇಶಿಸಬೇಕೆಂಬ ಕುತೂಹಲವುಳ್ಳವರಾಗಿದ್ದರೆ ಅಸ್ಥಿರವಾದ ಇಹಭಾಗ್ಯಗಳೇ ಪುರುಷಾರ್ಥಗಳೆಂದು ನೆನಸದೆ, ಪರಮ ರಾಜ್ಯದಲ್ಲಿ ಸೇರಿ ನಿತ್ಯಾನಂದಪದವಿಯನ್ನು ಅನುಭವಿಸುವ ಹಾಗೆ ಮುಕ್ತಿದಾಯಕನಾದ ಪರಮೇಶನಲ್ಲಿ ನಿಜವಿಶ್ವಾಸವನ್ನಿಟ್ಟು ಆತನ ಸಹಾಯದಿಂದ ನೀವು ಮೊದಲು ದೇವರ ರಾಜ್ಯವನ್ನೂ, ಆತನ ನೀತಿಯನ್ನೂ ಹುಡುಕಿರಿ.'

ಇದು ನಡೆದು ಈ ಹೊತ್ತಿಗೆ ಎರಡು ವರುಷಗಳಾದುವು. ಪ್ರಭಾಕರನೂ ಆತನ ಹೆಂಡತಿ ಅತ್ತೆಯರೂ ಮಾಧವರಾಯನೂ ಸಹ ಈಗ ಒಂದೇ ಮನೆಯಲ್ಲಿ ಸುಖವಾಗಿದ್ದಾರೆ. ಪಾನೀಯಾಹಾರಗಳಲ್ಲಿ ಮೊದಲಿನಂತೆಯೇ ಇದ್ದರೂ ಅವರ ನಡವಳಿಕೆಗಳಲ್ಲಿ ಬಹಳ ಬದಲಾವಣೆಗಳು ಉಂಟಾಗಿವೆ. ಅವರು ಮನಸಾ ಪರಿಪೂರ್ಣ ಕ್ರೈಸ್ತರಾಗಿದ್ದಾರೆ. ಅವರನ್ನು ನಿಜ ಕ್ರೈಸ್ತರೆಂದು ಹೇಳಬಹುದು. ಸ್ವಲ್ಪ ಸಂಸಾರ ಬಂಧನಗಳಿಂದಲೂ ಸಾಂಘಿಕ ಸಂಸರ್ಗಗಳಿಗೆ ಕೊರತೆಯುಂಟಾಗುವುದೆಂಬ ಭೀತಿಯಿಂದಲೂ ಅಲ್ಲದಿದ್ದರೆ ಅವರು ಇದುವರೆಗೆ ಎಂದೋ ಬಹಿರಂಗವಾಗಿ ಕ್ರೈಸ್ತ ಮತಾವಲಂಬಿಗಳಾಗುತ್ತಲಿದ್ದರು. ನಾಳೆ ನಾಳಿದ್ದು ಎಂದು ಮುಂದರಿಸುವುದು ಯೋಗ್ಯವಲ್ಲವೆಂದು ಅವರೆಲ್ಲರಿಗೂ ಚೆನ್ನಾಗಿ ಗೊತ್ತಿರುವುದರಿಂದ ಇಷ್ಟರಲ್ಲಿಯೇ ಅವರು ಬಹಿರಂಗವಾಗಿ ಕ್ರೈಸ್ತರಾಗಬೇಕೆಂದು ಅಪೇಕ್ಷಿಸುತ್ತಾರೆ. ಕೆಲವು ದಿನಗಳೊಳಗಾಗಿ ಅವರು ಯೇಸುವನ್ನು ತಮ್ಮ ರಕ್ಷಕನನ್ನಾಗಿ ಸ್ವೀಕರಿಸುವುದರಲ್ಲಿದ್ದಾರೆ. ಹಾಗೆ ಸ್ವೀಕರಿಸಿದರೆ ವಾಚಕರಾದ ನಿಮ್ಮೆಲ್ಲರಿಗೂ ತಿಳಿಯದಿರಲಾರದು.' (ಪುಟ 75 -76).

ಇದು 76 ಪುಟಗಳ ಹದಿಮೂರು ಅಧ್ಯಾಯಗಳ ಚಿಕ್ಕ ಕಾದಂಬರಿಯಾಗಿದೆ. ಈ ಕಾದಂಬರಿಯಲ್ಲಿ ಕ್ರೈಸ್ತ ಮತ ಪ್ರಚಾರ, ಹಿಂದೂ ಸಮಾಜ ವ್ಯವಸ್ಥೆ ಹಾಗೂ ಮೂಢನಂಬಿಕೆಗಳ ಖಂಡನೆ, ಸ್ತ್ರೀ ವಿದ್ಯಾಭ್ಯಾಸದ ಮಹತ್ವ ಮತ್ತು ವಿಧವಾವಿವಾಹ ಎಂಬ ನಾಲ್ಕು ಅಂಶಗಳಿಗೆ ಒತ್ತುಕೊಡಲಾಗಿದೆ. ಕ್ರೈಸ್ತ ಮತ ಪ್ರಚಾರವೇ ಇಲ್ಲಿನ ಪ್ರಧಾನ ಆಶಯವಾದುದರಿಂದ ಕ್ರೈಸ್ತ ಪ್ರಾರ್ಥನೆಗಳು ಮತ್ತು ಮತಪ್ರಸಂಗ - ಬೋಧನೆಗಳು ವಿವರವಾಗಿ ದಾಖಲಿಸಲ್ಪಟ್ಟಿವೆ.

ಉದಾಹರಣೆಗೆ, ಘನ ವೇದಮಿತ್ರ್ಯೆಯನವರ ಅಧ್ಯಕ್ಷತೆಯ ಒಂದು ಮತಪ್ರಸಂಗದ ಕೆಲವು ವಿವರಗಳು ಹೀಗಿವೆ:'ಅಧ್ಯಕ್ಷರು ಸ್ವಲ್ಪ ನಿಲ್ಲಿಸಿದರು. ಆಗ 'ಪಾಪಿಗಾಶ್ರಯ ಯೇಸು ನೀನೇ' ಎಂಬ ಸಂಗೀತವನ್ನು ಹಾಡಿದರು. ಸ್ತ್ರೀ ಜನಸಮುದಾಯದಿಂದ ಬಹು ಮಧುರವಾದ ಸಂಗೀತವು ಕೇಳಬರುತ್ತಲಿದೆ. ಸ್ತ್ರೀಯರು ಬಹುವಾಗಿ ನೆರೆದಿದ್ದಾರೆ ಓಹೋ! ಗುಡ್‌ವಿಲ್ ಮಿಸಿಯು ಎಲ್ಲಿ? ಆ ಪುಣ್ಯವಂತೆ! ಆ ದೈವಾರ್ಪಿತಳು! ಆ ಹಿತೈಷಿಣಿ! ಆ ಪರೋಪಕಾರಿಣಿ! ಆ ಸೌಂದರ್ಯವುಳ್ಳ ರಮಣಿಯು ಎಲ್ಲಿ? ಮಧುರವಾದ ಗೀತವು ಬರುತ್ತಿರುವ ಕಡೆಯಲ್ಲಿ ಕುರ್ಚಿಯ ಮೇಲೆ ಕುಳಿತುಕೊಂಡಿರುವ ಸ್ತ್ರೀಯು ಆಕೆಯೇ ಅಲ್ಲವೇ? ಆಹುದು; ಆಹುದು. ಪಕ್ಕದಲ್ಲಿ ಕುಳಿತಿರುವ ಹಿಂದೂ ಹೆಂಗಸಾರು? ಇದೇನು? ಬ್ರಾಹ್ಮಣ ಸ್ತ್ರೀಯಂತೆ ತೋರುವುದು! ಇದೇನು? ಈ ಅನ್ಯಾಯವೆಲ್ಲಿಯಾದರೂ ಉಂಟೇ? ಭಗವಂತನಿಗೆ ಭಕ್ತರ ಮೇಲೆ ಏನು ಕರುಣೆ! ಆಹಾ! ಬ್ರಾಹ್ಮಣ ಸ್ತ್ರೀ! ಯುವತಿ! ವಿದ್ಯಾವಿಹೀನೆ...! ಅಲ್ಲ, ಅಲ್ಲ, ವಿದ್ಯಾವಿಹೀನೆಯಾಗಿದ್ದರೆ ಮೂಢಭಕ್ತಿಗಳಲ್ಲಿ ಮುಳುಗಿಹೋಗುತ್ತಲಿದ್ದಳು. ಆಕೆಯು ವಿದ್ಯಾವತಿಯೆಂದು ಕಾಣುವುದು. ಇರಲಿ, ಈಕೆ ಆರಾಗಿರಬಹುದು? ಇಷ್ಟು ಮರ್ಯಾದೆ ಆರಿಗೆ